<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 273/2023**

| ಸಾಕ್ಷಿಯ ಹೆಸರು | ಶ್ರೀಮತಿ. ನಾರಾಯಣಮ್ಮ | ಚಾಸಾಃ | ಪ್ರಾಸಾಃ |
|---|---|---|---|
| ಗಂಡನ ಹೆಸರು | ಚೌಡಪ್ಪ | 2 | 6 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **14.01.2026.** | |
| ಉದ್ಯೋಗ | ಹೌಸ್ ಕಿಪಿಂಗ್ ಕೆಲಸ | | |
| ವಾಸ ಸ್ಥಳ | ಕೋನದಾಸಪುರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಭಾರತಿ / ಚಾಸಾ. 1 ರವರು ನನ್ನ ಸೊಸೆ. ಆರೋಪಿತರು ನನ್ನ ಸಂಬಂಧಿಕರು. ಆರೋಪಿತರ ಮನೆ ನಮ್ಮ ಮನೆಯ ಬಳಿ ಇರುತ್ತದೆ. ಸುಮಾರು 4 ವರ್ಷಗಳ ಹಿಂದೆ ಸಂಜೆ 5.30 ಕ್ಕೆ ನಾನು ಕೆಲಸಕ್ಕೆ ಹೋಗಿ ಬಂದು ನೀರನ್ನು ತರಲು ನಮ್ಮ ಮನೆಯ ಬಳಿ ಇರುವ ನಲ್ಲಿಯ ಬಳಿ ಹೋಗಿದ್ದೆ. ಆಗ ಆರೋಪಿ ನಂ. 1 ರವರು ಬಂದು ಜಗಳ ಮಾಡಿದ್ದರು. ನಮ್ಮಗಳ ನಡುವೆ ಜಾಗದ ವಿಚಾರದಲ್ಲಿ ಹಳೇ ದ್ವೇಷದಿಂದ ಜಗಳ ಮಾಡಿದ್ದರು. ಆಕೆ ನನ್ನ ಮೇಲೆ ಕೆಟ್ಟ ಮಾತುಗಳನ್ನು ನುಡಿದಿದ್ದರು. ನಂತರ ಜಗಳ ಜಾಸ್ತಿಯಾಯಿತು. ನಂತರ ಉಳಿದ ಆರೋಪಿತರು ಬಂದರು. ಆರೋಪಿತರು ನನಗೆ ಹೊಡೆದರು. ನನ್ನ ತಲೆಗೆ ಯಾವುದೇ ವಸ್ತುವಿನಿಂದ ಹೊಡೆದರು. ನನಗೆ ರಕ್ತ ಬಂದು ನಾನು ಅಲ್ಲೆ ಕುಳಿತುಕೊಂಡೆ. ಚಾಸಾ. 1 ಬಂದು ಬಿಡಿಸಲು ಹೋದಾಗ ಆಕೆಯನ್ನು ಸಹ ಹೊಡೆದರು. ಆಕೆಯ ಹೊಟಗೆ ಏಟಾಯಿತು. ನಂತರ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮಂಜುನಾಥ್ / ಚಾಸಾ. 7 ರವರು ಆಸ್ಪತ್ರೆಗೆ ಬಂದ. ಪೋಲೀಸರು ನನ್ನ ಹೇಳಿಕ ತೆಗೆದುಕೊಂಡರೋ ಇಲ್ಲವೋ ಗೊತ್ತಿಲ್ಲ, ನನ್ನ ಸೀರೆ ಬ್ಲೌಸ್ ರಕ್ತದ ಕಲೆಯಾಗಿತ್ತು. ಅವುಗಳನ್ನು ಪೊಲೀಸರಿಗೆ ನೀಡಿರುತ್ತೇನೆ.

(ಮುದ್ದೆ ಮಾಲನ್ನು ಗುರುತಿಸುವ ಬಗ್ಗೆ ಮುಂದಿನ ದಿನಾಂಕ ನೀಡಲಾಯಿತು)

(ಈ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಘಟನೆಯಾದ ದಿನಾಂಕ 03.01.2023 ಎಂದರೆ ಸರಿ. ಆ ದಿನ ಆರೋಪಿತರು ಎಲ್ಲರೂ ಸೇರಿ ಬಾಯಿಗೆ ಬಂದಂತೆ ಬೈದು ನನ್ನನ್ನು ಸಾಯಿಸುವ ಉದ್ದೇಶದಿಂದ ಆರೋಪಿ ನಂ. 1 ರವರು ಕಬ್ಬಿಣದ ಸಲಾಕೆಯಿಂದ ನನ್ನ ತಲೆಯ ಭಾಗಕ್ಕೆ ಹೊಡೆದರು ಎಂದರೆ ಸರಿ. ಆರೋಪಿ ನಂ. 3 ರವರುಕಬ್ಬಿಣದ ಸಲಾಕೆಯನ್ನು ಕಿತ್ತುಕೊಂಡು ನನ್ನ ತೆಯ ಮಧ್ಯಭಾಗಕ್ಕೆ ಹೊಡೆದರು ಎಂದರೆ ಸರಿ. ಆರೋಪಿ ನಂ. 2 ಮತ್ತ 4 ರವರು ನನ್ನ ಹಿಡಿದುಕೊಂಡಿದ್ದರು ಎಂದರೆ ಸರಿ. ಅವರು ಎಲ್ಲರೂ ಕೈಗಳಿಂದ ಹೊಡೆದು ಕಾಲುಗಳಿಂದ ಹೊಡೆದು ನೊವುಂಟು ಮಾಡಿದ್ದರು ಎಂದರೆ ಸರಿ. ಚಾಸಾ. 1 ರವರು ಬಿಡಿಸಲು ಬಂದಾಗ ಎಲ್ಲರೂ ಸೇರಿ ಆಕೆಯ ಹೊಟ್ಟೆಗೆ ಕಾಲಿನಿಂದ ಒದ್ದರು ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಪೋಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.